

ಅಕ್ಷಯ ಕ್ಷೇತ್ರದ ನಿವಾಸಿಗಳ ‘ಸಾಮೂಹಿಕ ಜನ್ಮದಿನಾಚರಣೆ’ ಸಂಭ್ರಮ

ಹೆಸರು) ಕುತ್ತಿಗೆಯೇ ನಿಲ್ಲುತ್ತಿರಲಿಲ್ಲ. ಸೂಕ್ತ ಫಿಸಿಯೊಥೆರಪಿಯೊಂದಿಗೆ ಮಗುವನ್ನು ಆರೈಕೆ ಮಾಡಲಾಯಿತು. ಈಗ ಆಕೆಗೆ 12 ವರ್ಷ. ಅಂಗೈನಲ್ಲಿ ಆಹಾರವಿಟ್ಟರೆ ತಿನ್ನುವಷ್ಟು ಸುಧಾರಿಸಿದ್ದಾಳೆ. ಇನ್ನೂ ಮಾತು ಬರುವುದಿಲ್ಲ. ಸಂಜ್ಞೆ ಮೂಲಕ ಮಾತಾಡುತ್ತಾಳೆ. ನಡೆಯಲಾಗುವುದಿಲ್ಲ, ತೆವಳುತ್ತಾಳೆ. ಶಬ್ದ ಮಾಡುವ ಬಣ್ಣಗಳ ಆಟಿಕೆ ಕಂಡರೆ ತುಂಬಾ ಇಷ್ಟ. ಆ ಶಬ್ದಕ್ಕೆ ಬೇಗ ಸ್ಪಂದಿಸುತ್ತಾಳೆ ಎನ್ನುತ್ತಾರೆ ಆಶ್ರಮದ ಸಿಬ್ಬಂದಿ.

ಸೀತಾ ಐದು ವರ್ಷದವಳಿದ್ದಾಗ ಇದೇ ಟಿಟಿಡಿ ಬಾಲಮಂದಿರದಿಂದ ಆಶ್ರಮಕ್ಕೆ ಬಂದಳು. ಮಾತು ಬರುತ್ತಿರಲಿಲ್ಲ ಆಕೆಗೆ. ಸ್ಪೀಚ್ ಥೆರಪಿಯಂತಹ ಚಿಕಿತ್ಸೆ ನೀಡಿದ ನಂತರ, ಈಗ ಆಕೆ ಸ್ವಲ್ಪ ಮಾತಾಡ್ತಾಳೆ. ಸ್ಥಳೀಯ ಶಾಲೆಗೆ ಹೋಗುವಷ್ಟು ಬದಲಾಗಿದ್ದಾಳೆ. 10ನೇ ಕ್ಲಾಸ್ ಓದುತ್ತಿದ್ದಾಳೆ.

ಅಷ್ಟೇ ಅಲ್ಲ, ಆರೈಕೆಗಾಗಿ ಈ ಆಶ್ರಮಕ್ಕೆ ಬಂದಿದ್ದ ಮೂವರು ಮಹಿಳೆಯರು ಸೂಕ್ತ ಚಿಕಿತ್ಸೆ ಪಡೆದು ಗುಣಮುಖರಾಗಿ ಮದುವೆ ಮಾಡಿಕೊಂಡು, ಸುಖವಾಗಿ ಸಂಸಾರ ನಡೆಸುತ್ತಿದ್ದಾರೆ. ಇವೆಲ್ಲ ಅಕ್ಷಯ ಕ್ಷೇತ್ರದಲ್ಲಿ ಕಂಡ ಬದಲಾವಣೆಯ ಬೆಳಕು ಎನ್ನುತ್ತಾರೆ ಆಶ್ರಮದ ಸಿಬ್ಬಂದಿ. ಸಾಮಾಜಿಕ ಪಿಡುಗಾಗಿರುವ ಮಾನಸಿಕ ಅಸ್ವಸ್ಥತೆ ಎಂಬುದು ಸಮಾಜದಿಂದ ದೂರವಾಗಬೇಕೆಂಬುದು ಅಕ್ಷಯ ಕ್ಷೇತ್ರಂ ಪ್ರತಿಷ್ಠಾನದ ಆಶಯ.

## ಅರಿವು ಮೂಡಿಸುವ ಗುರಿ...

ಅಕ್ಷಯ ಕ್ಷೇತ್ರಂ ಪ್ರತಿಷ್ಠಾನ ಚಾರಿಟಬಲ್ ಟ್ರಸ್ಟ್, ಮಾನಸಿಕ ಸಮಸ್ಯೆಯಿರುವ ಮಹಿಳೆಯರ ಆರೈಕೆ ಮತ್ತು ಆಶ್ರಯಕ್ಕಾಗಷ್ಟೇ ಆರಂಭವಾದ



ಆಧುನಿಕ ಉಪಕರಣಗಳೊಂದಿಗೆ ವ್ಯಾಯಾಮ

ಸಂಸ್ಥೆಯಲ್ಲ. ಈ ಸಮಸ್ಯೆ ಬಗ್ಗೆ ಸಮಾಜದಲ್ಲಿರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವ ಉದ್ದೇಶವನ್ನೂ ಹೊಂದಿದೆ.

ಹುಟ್ಟಿದ ಮಗುವಿಗೆ ಮಾನಸಿಕ ಅಸ್ವಸ್ಥತೆ ಇದೆ ಎಂಬ ಕಾರಣಕ್ಕೆ, ಸಮಾಜಕ್ಕೆ ಅಂಜುತ್ತಾ, ಹೊರ ಜಗತ್ತಿಗೆ ಆ ಮಗುವನ್ನು ಪರಿಚಯಿಸದ ಪೋಷಕರಿದ್ದಾರೆ. ಮನೆಯಲ್ಲಿ ದೊಡ್ಡ ಮಗಳಿಗೆ ಮದುವೆ ಗೊತ್ತಾಗಿದೆ. ಚಿಕ್ಕವಳಿಗೆ ಇಂಥದ್ದೊಂದು ಸಮಸ್ಯೆ ಇದೆ ಎಂದರೆ, ಆಕೆಗೆ ಮದುವೆಯಾಗೋದು ಕಷ್ಟ. ಮದುವೆಯಾಗುವವರೆಗೂ ನಿಮ್ಮ ಆಶ್ರಮದಲ್ಲಿರಲಿ. ನಂತರ ಕರೆದುಕೊಂಡು ಹೋಗುತ್ತೇವೆ’ ಎಂದು ಹೇಳಿ ಆಶ್ರಮದಲ್ಲಿ ಬಿಟ್ಟು ಹೋಗುವವರೂ ಇದ್ದಾರೆ. ‘ಎಷ್ಟೋ ಮಂದಿ, ಇಲ್ಲಿಗೆ ಬಿಟ್ಟು ಹೋದವರ ಯೋಗಕ್ಷೇಮ ವಿಚಾರಿಸಲೂ ಬರುವುದಿಲ್ಲ. ಸಮಾಜದಲ್ಲಿರುವ ಇಂಥ ಮನಸ್ಥಿತಿಗಳನ್ನು ಬದಲಾಯಿಸುವ ಉದ್ದೇಶವೂ ನಮ್ಮ ಪ್ರತಿಷ್ಠಾನದ್ದಾಗಿದೆ’ ಎನ್ನುತ್ತಾರೆ ಆಶ್ರಮದ ಆಡಳಿತ ಮಂಡಳಿ.

ಇಂಥ ಸಾಮಾಜಿಕ ಪಿಡುಗಿನ ಬಗ್ಗೆ ಜಾಗೃತಿ ಮೂಡಿಸಲು ನಮ್ಮ ಆಶ್ರಮದೊಂದಿಗೆ ಕೈಜೋಡಿಸುವವರು ಬೇಕು. ಆಶ್ರಮ ಮುನ್ನಡೆಸಲು, ಸಿಬ್ಬಂದಿಯ ಕೌಶಲವನ್ನು ವೃದ್ಧಿಸಬೇಕಿದೆ. ಆಶ್ರಮದಲ್ಲಿ ಕ್ರೀಡಾ ಚಟುವಟಿಕೆ ಹೆಚ್ಚಿಸಬೇಕಿದೆ. ಇನ್ನಷ್ಟು ನಿವಾಸಿಸ್ನೇಹಿ ವಾತಾವರಣ ರೂಪಿಸಬೇಕಿದೆ. ಎಲ್ಲದಕ್ಕೂ ‘ಸಂಪನ್ಮೂಲ’ ಬೇಕು. ಈಗಾಗಲೇ ಹಲವರು ಈ ಕೆಲಸಕ್ಕೆ ಹಣ, ಉಡುಗೊರೆ ರೂಪದಲ್ಲಿ ನೆರವಾಗುತ್ತಿದ್ದಾರೆ. ಆಶ್ರಮ ನಡೆಸುವಂತಹ ದೀರ್ಘ ಪಯಣದಲ್ಲಿ ಸಾಗುವುದಕ್ಕೆ ಇನ್ನಷ್ಟು ಕೈಗಳ ಆಸರೆ ಬೇಕಿದೆ ಎಂಬುದು ಅಕ್ಷಯ ಕ್ಷೇತ್ರಂ ಜೊತೆಗಿರುವವರ ಆಶಯ.

ಆಶ್ರಯದಾತರ ಆಶಯ ಫಲಿಸಲಿ. ಬದುಕು ಅಕ್ಷಯವಾಗಲಿ. ಪ್ರೀತಿಯೇ ಬಂಗಾರವಾಗಲಿ!

ಪ್ರತಿಕ್ರಿಯಿಸಿ: **feedback@sudha.co.in**

**ಆಶ್ರಮದ ಇಮೇಲ್:**
akshayakshetramtech@gmail.com
**ವಾಟ್ಸ್ಆ್ಯಪ್:**
**ಕೆ. ಸತ್ಯಪ್ರಸಾದ್:** +91 9818688722,
**ಲಾವಣ್ಯ ರಾವ್:** +91 9000192176